ವಿಷಯ:- ಸಕಲೇಶಪುರದ ಪದವಿ ಕಾಲೇಜಿನಲ್ಲಿ ವಾಣಿಜ್ಯ ವಿಷಯದಲ್ಲಿ ಭೋದಕರ ನೇಮಕ.

1350 (2172) **ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ):-** ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಕಲೇಶಪುರ ಡಿಗ್ರಿ ಕಾಲೇಜಿನಲ್ಲಿ ಕಾಮರ್ಸ್ ವಿಷಯದ ಬೋಧಕರಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು):-

ಅ) ಬಂದಿದೆ.

ಆ) ಈ ಕಾಲೇಜಿನಲ್ಲಿ ವಾಣಿಜ್ಯ ವಿಷಯದಲ್ಲಿ 02 (ಎರಡು) ಮಂಜೂರಾದ ಹುದ್ದೆಗಳು ಇದ್ದು, ಈಗಾಗಲೇ 01 (ಒಂದು) ಹುದ್ದೆಯನ್ನು ದಿನಾಂಕ: 15-6-96ರಂದು ಭರ್ತಿ ಮಾಡಲಾಗಿದೆ. ಉಳಿದ 01 (ಒಂದು) ಹುದ್ದೆಯನ್ನು ಶೀಘ್ರದಲ್ಲೇ ಭರ್ತಿ ಮಾಡಲಾಗುವುದು.

ಅಧ್ಯಕ್ಷರು:- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಉತ್ತರಗಳನ್ನು ಮಂಡಿಸಲಾಯಿತು.

4. ಪ್ರಕಟಣೆ

ಅಧ್ಯಕ್ಷರು:- ದಿನಾಂಕ 5–8–1996ರಂದು ಉಪವೇಶನವಿಲ್ಲದ ಕಾರಣ ಸದರಿ ದಿನಾಂಕ ಸದನದಲ್ಲಿ ಉತ್ತರಿಸುವ 21ನೇ ಪಟ್ಟಿಯಲ್ಲಿನ 15 ಪ್ರಶ್ನೆಗಳ ಪೈಕಿ 6 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯಲ್ಲಿನ 74 ಪ್ರಶ್ನೆಗಳ ಪೈಕಿ 35 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಇಡುತ್ತೇನೆ. ದಿನಾಂಕ 6–8–1996ರಂದು ಉಪವೇಶನವಿಲ್ಲದ ಕಾರಣ ಸದರಿ ದಿನಾಂಕದ ಸದನದಲ್ಲಿ ಉತ್ತರಿಸುವ 28ನೇ ಪಟ್ಟಿಯಲ್ಲಿನ 15 ಪ್ರಶ್ನೆಗಳ ಪೈಕಿ 4 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯಲ್ಲಿನ 49 ಪ್ರಶ್ನೆಗಳ ಪೈಕಿ 11 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಇಡುತ್ತೇನೆ.

ವಿಷಯ:- ಲೋಕೋಪಯೋಗಿ ಇಲಾಖೆಯಿಂದ ಖರೀದಿಸಿದ ಡಾಂಬರ್.

1188 (1774) **ಶ್ರೀ ಗೋವಿಂದ ಎಂ. ಕಾರಜೋಳ(ಮುಧೋಳ):-** ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1995–96 ಮತ್ತು 1996 ಜೂನ್ ತಿಂಗಳ ಅಂತ್ಯದವರೆಗೆ ರಾಜ್ಯ ಲೋಕೋಪಯೋಗಿ ಇಲಾಖೆಯಿಂದ ಖರೀದಿಸಿದ ಡಾಂಬರ್ 80-100 ಅಸ್‌ಫಾಲ್ಟ್ ಪ್ರಮಾಣವೆಷ್ಟು? (ಪ್ರತಿ ವಿಭಾಗಕ್ಕೆ (ಮೆಟ್ರಿಕ್ ಟನ್ನುಗಳಲ್ಲಿ) ವಿವರ ನೀಡುವುದು?

ಆ) 1995–96 ಮತ್ತು 1996 ಜೂನ್ ತಿಂಗಳ ಅಂತ್ಯದವರೆಗೆ ರಾಜ್ಯದಲ್ಲಿ ಎಷ್ಟು ಕಿಮೀ ರಸ್ತೆ